ಶ್ರೀ ಬಿ. ಬಸವಲಿಂಗಪ್ಪ : ಸರ್ಕಾರಿ ಕಾರ್ಖಾನೆಗಳು ಯಾವುದೆಂದು ನನಗೆ ಗೊತ್ತಿಲ್ಲ. ನಮ್ಮ ರೀಜಿನಲ್ ಆಫೀಸರ್ ಬುದ್ಧಿವಂತರು ಹೆಸರನ್ನು ಕೊಡದೆ ಇರತಕ್ಕವರು ಇದ್ದಾರೆ.

ಶ್ರೀ ಆರ್.ಎನ್. ನಾಯಕ್ : ವಿವರಣೆ ಕೊಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ವಿವರಗಳನ್ನೆ ಅವರು ನಮಗೆ ಕೊಟ್ಟಿಲ್ಲ.

ಅಧ್ಯಕ್ಷರು : ವಿವರವನ್ನು ತರಿಸಿಕೊಡಿ.

ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ.

353 - ಶ್ರೀ ಬಾಬುರಾವ್ ಚವಾಣ್ (ಶಹಾಬಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲಂಬಾಣಿ ತಾಂಡಗಳನ್ನು ಕಂದಾಯ ಹಳ್ಳಿಯನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದ ನಿಲುವೇನು?*

ಆ) *ಹಾಗಿದ್ದಲ್ಲಿ ಸಕಾರದ ಗಮನದಲ್ಲಿ ಲಂಬಾಣಿ ತಾಂಡಗಳಲ್ಲಿ ಕಂದಾಯ ಹಳ್ಳಿಯಾಗಿ ಮಾಡಲು ಹಾಕಿಕೊಂಡ ಯೋಜನೆಗಳೇನು?*

ಇ) *ಯಾವಾಗ ಕಂದಾಯ ಹಳ್ಳಿಯನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗುವುದು?*

ಈ) *ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಗಳನ್ನು ಹ್ಯಾಮ್‌ಲೆಟ್‌ಗಳನ್ನು ಸರ್ಕಾರವು ಗುರ್ತಿಸಿ, ಎಲ್ಲೆಲ್ಲಿ ಅವಶ್ಯಕತೆ ಕಂಡುಬರುವುದೋ ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದು.

ಆ) ಜಿಲ್ಲಾಧಿಕಾರಿಗಳೊಡನೆ ಸಮಾಲೋಚಿಸಿ ಲಂಬಾಣಿ ತಾಂಡ :ಹ್ಯಾಮ್‌ಲೆಟ್‌ಗಳನ್ನು ಹಂತ-ಹಂತವಾಗಿ ಕಂದಾಯ ಗ್ರಾಮಗಳನ್ನು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಆದಷ್ಟು ಶೀಘ್ರವಾಗಿ.

ಈ) (ಅ) ನಲ್ಲಿ ಉತ್ತರಿಸಿದಂತೆ.

ಶ್ರೀ ಬಾಬುರಾವ್ ಆರ್. ಚವಾಣ್ : ಸದಸ್ಯರು ಲಂಬಾಣಿ ಭಾಷೆಯಲ್ಲಿ ಪ್ರಶ್ನೆ ಕೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಂದಾಯ ಮಂತ್ರಿ ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಏನೆಂದರೆ, ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಬೇಕು. ಊರಿನ ಹೊರಗಡೆ ಸಾಕಷ್ಟು ಸವಲತ್ತುಗಳಿದ್ದು, ಆ ಸವಲತ್ತುಗಳು ಲಂಬಾಣಿ ತಾಂಡಾಗಳಿಗೆ ಸಿಗುತ್ತಿಲ್ಲ. ವಿದ್ಯುಚ್ಛಕ್ತಿ, ಸ್ಕೂಲು ಮತ್ತು ಇನ್ನಿತರ ಸವಲತ್ತುಗಳಿಂದ ಲಂಬಾಣಿ ತಾಂಡಾಗಳು ವಂಚಿತವಾಗಿವೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಸರ್ಕಾರ ಲಂಬಾಣಿ ತಾಂಡಾಗಳನ್ನು, ಹ್ಯಾಮ್ಲೆಟ್‌ಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸುವ ಬಗ್ಗೆ ನಿರ್ಧಾರ ತೆಗೆದುಕೊಂಡಿದೆ. ಅದನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಬೇಕಾಗುತ್ತದೆ. ಅದಕ್ಕೆ ಕೆಲವು ಕ್ರೈಟೀರಿಯಾ ಫಿಕ್ಸ್ ಮಾಡಿದ್ದೇವೆ. Population of 500 or more, 100 house-holds, 1500acres of land adjacent to the Tandas or hamlets and it should not be adjacent to the existing

village, no objection from Mandal Panchayath, ಈ ರೀತಿ 4-5 ಕ್ರೈಟೀರಿಯಾ ಹಾಕಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿದ್ದೇವೆ. ಜಿಲ್ಲಾಧಿಕಾರಿಗಳಿಂದ ವರದಿ ಬಂದ ತಕ್ಷಣ ನೋಟಿಫಿಕೇಶನ್ ಮಾಡುತ್ತೇವೆ. ಈಗಾಗಲೇ ಗುಲ್ಬರ್ಗಾ ಜಿಲ್ಲೆಯಿಂದ ಕೆಲವು ವರದಿಗಳು ಬಂದಿವೆ. ಇನ್ನು 7-8 ದಿವಸಗಳಲ್ಲಿ ವರದಿಯ ಆಧಾರದ ಮೇಲೆ ನೋಟಿಫಿಕೇಶನ್ ಇಶ್ಯೂ ಮಾಡುತ್ತೇವೆ.

ಶ್ರೀ ಬಾಬುರಾವ್ ಆರ್. ಚವಾಣ್ : ಮಾನ್ಯ ಅಧ್ಯಕ್ಷರೇ, ನಾನು ಲಂಬಾಣಿ ಭಾಷೆಯಲ್ಲಿ ಮಾತನಾಡಿದುದನ್ನು ತಾವು ಕೇಳಲಿಲ್ಲ, ಮಾನ್ಯ ಮಂತ್ರಿಗಳೂ ಕೇಳಲಿಲ್ಲ. ನಾನು ಲಂಬಾಣಿ ಭಾಷೆಯಲ್ಲಿ ಏತಕ್ಕೆ ಮಾತನಾಡಿದೆ ಎಂದರೆ, ಕರ್ನಾಟಕ ರಾಜ್ಯದಲ್ಲಿರತಕ್ಕ ಲಂಬಾಣಿ ತಾಂಡಾಗಳಲ್ಲಿನ ಲಂಬಾಣಿ ಜನರು ಊರು ಬಿಟ್ಟು ಕನಿಷ್ಠ 15-20-40 ಕಿಲೋಮೀಟರ್‌ಗಳ ದೂರದವರೆಗೆ ನಡೆದುಕೊಂಡು ಹೋಗುತ್ತಾರೆ, ಬರುತ್ತಾರೆ. ಅವರಿಗೆ ಜನ ಸಂಪರ್ಕವಿಲ್ಲ, ಲಂಬಾಣಿ ತಾಂಡಾಗಳಲ್ಲಿರತಕ್ಕ ಶೇಕಡಾ 90 ಜನರಿಗೆ ಕನ್ನಡ ಮಾತನಾಡುವುದಕ್ಕೆ ಬರುವುದಿಲ್ಲ, ಆದುದರಿಂದ,ನಾನು ಏತಕ್ಕೆ ಕನ್ನಡದಲ್ಲಿ ಮಾತನಾಡಬೇಕೆಂಬ ಉದ್ದೇಶ ಇಟ್ಟುಕೊಂಡು ಲಂಭಾಣಿ ಭಾಷೆಯಲ್ಲಿ ಮಾತನಾಡಿದ್ದೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಊರಿನಿಂದ ದೂರದಲ್ಲಿರುವ ಗುಡ್ಡಗಾಡು ಪ್ರದೇಶಗಳಲ್ಲಿರತಕ್ಕಂಥ ಲಂಬಾಣಿ ಜನರು ಕಟ್ಟಿಗೆ ಹೊಡೆದುಕೊಂಡು ಜೀವನ ಸಾಗಿಸುತ್ತಾರೆ. ಅವರಿಗೆ ಊರಿನ ಸಂಪರ್ಕವಿಲ್ಲ, ರಸ್ತೆಯ ಸಂಪರ್ಕವಿಲ್ಲ, ವ್ಯವಹಾರ ಜ್ಞಾನ ಇಲ್ಲ. ಆದ್ದರಿಂದ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸಿದರೆ ಅಲ್ಲಿ ಏನಾಗುತ್ತದೆಂದರೆ, ಒಂದು ದವಾಖಾನೆಯಾಗುತ್ತದೆ,

ಅಲ್ಲಿಗೆ ವಿಲೇಜ್ ಅಕೌಂಟೆಂಟ್ ಬರುತ್ತಾರೆ, ಆಗ ಅಲ್ಲಿಗೆ ಜನರು ಬಂದು ಕನ್ನಡದಲ್ಲಿ ಮಾತನಾಡುತ್ತಾರೆ, ಬೇರೆ ಭಾಷೆಯಲ್ಲೂ ಸಹ ಮಾತನಾಡುತ್ತಾರೆ.ಆಗ ಅವರನ್ನು ಅಭಿವೃದ್ಧಿ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬಹುದು ಎನ್ನುವ ಉದ್ದೇಶವಿಟ್ಟುಕೊಂಡು ನಾನು ಲಂಬಾಣಿ ಭಾಷೆಯಲ್ಲಿ ಮಾತನಾಡಿದ್ದೇನೆಯೇ ವಿನಃ ಬೇರೆ ಯಾವ ಉದ್ದೇಶದಿಂದಲ್ಲ ಹೋದ ಸಲ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಸ್ಪೀಚ್‌ನಲ್ಲಿ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುತ್ತೇವೆಂದು ಹೇಳಿದ್ದರು. ಹಾಗೆ ಹೇಳಿ ಸುಮಾರು ಒಂದೂವರೆ ವರ್ಷವಾಯಿತು. ಅನಂತರ ಕಂದಾಯ ಸಚಿವರು 300 ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದಾಗಿ ಹೋದ ಸಲದ ವಿಧಾನಸಭೆಯಲ್ಲಿ ಹೇಳಿದ್ದರು. ಅದಿನ್ನೂ ಕಾರ್ಯಗತವಾಗಿಲ್ಲ. ಈಗ ಜಿಲ್ಲಾಧಿಕಾರಿಗಳೊಡನೆ ಸಮಾಲೋಚಿಸಿ ಲಂಬಾಣಿ ತಾಂಡಾಗಳನ್ನು ಹಂತ ಹಂತವಾಗಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ಯಾವಾಗ ಮಾಡುತ್ತೀರಿ? ನಾನು ಮೂರು ವರ್ಷಗಳಿಂದ ಶಾಸಕನಾಗಿ ಇಲ್ಲಿ ಕುಳಿತಿದ್ದೇನೆ. ಇನ್ನು 2-3 ವರ್ಷಗಳ ಕಾಲ ಇದ್ದು ಹೋಗಿಬಿಡುತ್ತೇನೆ. ಈ ಕೆಲಸವನ್ನು ಯಾವಾಗ ಮುಗಿಸುತ್ತೀರಿ? ಕನಿಷ್ಠ ಪಕ್ಷ ಈ ತಾಂಡಾಗಳನ್ನು ಕಂದಾಯ ಹಳ್ಳಿಗಳನ್ನಾಗಿ ಮಾಡಲು ಎಷ್ಟು ಅವಧಿ ಬೇಕಾಗುತ್ತದೆ? ಎಂಬ ತಮ್ಮ ಒಂದು ಖಚಿತ ನಿಲುವನ್ನು ತಿಳಿಸಬೇಕೆಂದು ಸರ್ಕಾರದ ಪರವಾಗಿ ಒತ್ತಾಯಿಸುತ್ತೇನೆ.

ಅಧ್ಯಕ್ಷರು : ನೀವು ಲಂಬಾಣಿ ಭಾಷೆ ಮಾತನಾಡುವಾಗ ನಾನು ಏತಕ್ಕೆ ನಿಮ್ಮನ್ನು ಕೇಳಲಿಲ್ಲವೆಂದರೆ, ನಿಮ್ಮ ಭಾಷೆ ಬಗ್ಗೆ ನನಗೆ ಗೌರವವಿದೆ, ಅದಕ್ಕೋಸ್ಕರ ನಿಮ್ಮನ್ನು ಕೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಹೊರಗಡೆಯಿಂದ ಬರುತ್ತಿದ್ದಾಗ ದೂರದರ್ಶನದಲ್ಲಿ ನೋಡಿದೆ. ಡೂರದರ್ಶನದಲ್ಲಿ ಬೇರೆ ಭಾಷೆ ಬರುತ್ತಿರುವುದನ್ನು ನೋಡಿ. ಗಾಬರಿಯಿಂದ ಒಳಗಡೆ ಬಂದೆ. ಆದುದರಿಂದ, ನನಗೂ ಬೇರೆ ಭಾಷೆ ದ್ವೇಷಕ್ಕಿಂತ ರಾಜ್ಯಭಾಷೆ ಕನ್ನಡ ಇರುವುದರಿಂದ ಇಲ್ಲಿರತಕ್ಕ ಶಾಸಕರುಗಳೆಲ್ಲಾ ಗಂಭೀರವಾಗಿ ಕನ್ನಡದಲ್ಲೇ ಮಾತನಾಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನ್ನ ಹೃದಯ ಗಟ್ಟಿ ಹೃದಯ ಕನ್ನಡದ ಹೃದಯ - ಇದಕ್ಕೆ ಏನೂ ಆಗುವುದಿಲ್ಲ.

(ಗೊಂದಲ)

ಶ್ರೀ ಬಾಬುರಾವ್ ಆರ್ ಚೌವಾಣ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ನಮ್ಮ ಪ್ರಶ್ನೆ ಅರ್ಥವಾಗಲಿಲ್ಲ. ಕನ್ನಡವನ್ನು ನಮ್ಮ ಲಂಬಾಣಿಯ ಜನರು ಕಲಿಯಲಿ, ಕನ್ನಡದ ಅಭಿಮಾನ ನಮ್ಮಲ್ಲಿ ಬರಲಿ, ಕನ್ನಡದ ಬಗ್ಗೆ ನಾವು ಹೋರಾಡಲು, ಕನ್ನಡದಲ್ಲಿ ಏನಿದೆ ಎನ್ನುವುದರ ಬಗ್ಗೆ ಅರ್ಥಮಾಡಿಕೊಳ್ಳಲು ಬೇಕಾಗಿದೆ. ನಮ್ಮ ಸುಮಾರು 90 ರಷ್ಟು ಜನರಿಗೆ ಕನ್ನಡ ಗೊತ್ತಿಲ್ಲ, ಕನ್ನಡವನ್ನು ಮಾತನಾಡಲು ಬರುವುದಿಲ್ಲ, ಲಂಬಾಣಿ ಭಾಗದಲ್ಲಿರತಕ್ಕ ತಾಂಡಾದಲ್ಲಿರತಕ್ಕ ಜನ ಲಂಬಾಣಿ ಭಾಷೆಯಲ್ಲಿ ಮಾತನಾಡುತ್ತಾರೆ, ಅದರಲ್ಲಿ ಊಟ ಮಾಡುತ್ತಾರೆ, ಅದರಲ್ಲಿಯೇ ವ್ಯವಹಾರ ಮಾಡುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾಂಡಾ ಜನರ ಬಗ್ಗೆ ನಮ್ಮ ವಿರೋಧವಿಲ್ಲ. ತಾಂಡಾ ಜನರ ಅಭಿವೃದ್ಧಿಯಾಗಬೇಕು, ಅವರ ಬೆಳವಣಿಗೆಯಾಗಬೇಕು, ಅವರಿಗೆ ಏನೇನು ಬೇಕೋ ಆ ಎಲ್ಲಾ ಸೌಲಭ್ಯಗಳನ್ನು ಕೊಡಬೇಕು, ಅವರು ಕನ್ನಡವನ್ನು ಕಲಿಯಲೇ ಬೇಕು.

(ಗೊಂದಲ)

ಡಾ. ಹೆಗ್ಗಪ್ಪ ದೇಶಪ್ಪ ಲಮಾಣಿ : ಮಾನ್ಯ ಅಧ್ಯಕ್ಷರೆ, ವಾಟಾಳ್‌ನಾಗರಾಜ್ ರವರು ತಾಂಡಾ ಜನರು ಕನ್ನಡವನ್ನು ಕಲಿಯಲೇಬೇಕು ಎಂದು ಹೇಳುತ್ತಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ನಮಗೆ ಕನ್ನಡವನ್ನು ಕಲಿಯಲು ಅವಕಾಶವಿಲ್ಲವೆಂದ ಮೇಲೆ ನಾವು ಯಾವಾಗ ಕಲಿಯಬೇಕು, ಎಲ್ಲಿ ಕಲಿಯಬೇಕು. ಎರಡನೆಯದಾಗಿ, ಏನಾಗಿದೆ ಎಂದರೆ, ತಾಂಡಾ ದೊಡ್ಡದಿರುತ್ತದೆ, ಪಕ್ಕದಲ್ಲಿ ಒಂದು ಸಣ್ಣ ಊರು ಇರುತ್ತದೆ, ಆದರೆ ನಾವು ಇಡೀ ದೊಡ್ಡ ತಾಂಡಾದವರು ಸಹಿತ ಆ ಊರಿನ ಹೆಸರಿನಿಂದಲೇ ಅಲ್ಲಿ ಕರೆಯಲ್ಪಡಬೇಕಾಗುತ್ತದೆ. ಅಲ್ಲಿ ಒಂದು ಹೈಸ್ಕೂಲ್ ಇಲ್ಲ, ಪ್ರಾಥಮಿಕ ಕಾಲೇಜು ಇರುವುದಿಲ್ಲ, ಆಸ್ಪತ್ರೆ ಇರುವುದಿಲ್ಲ, ಸರ್ಕಾರಿ ಕಛೇರಿಗಳಿರುವುದಿಲ್ಲ ಅಂಥಾದ್ದರಲ್ಲಿ ರೆವಿನ್ಯೂ ವಿಲೇಜ್‌ಗಳನ್ನು ಮಾಡುತ್ತೇವೆಂದು ಹಿಂದಿನ ವರ್ಷದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸಹ ಆಶ್ವಾಸನೆಯನ್ನು ಕೊಟ್ಟಿದ್ದರು ಮತ್ತು ಮಾನ್ಯ ಕಂದಾಯಸಚಿವರೂ ಸಹ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಇಡೀ ವರ್ಷದಲ್ಲಿ ಅದರ ಕೆಲಸವಾಗಲಿಲ್ಲ,ಒಂದೇ ಒಂದು ತಾಂಡವನ್ನೂ ಸಹ ರೆವಿನ್ಯೂ ವಿಲೇಜ್‌ನ್ನಾಗಿ ಮಾಡಲಿಲ್ಲ, ಕಂದಾಯ ಗ್ರಾಮವನ್ನಾಗಿ ಮಾಡಲಿಲ್ಲ. ಈಗಿನ ಉತ್ತರವನ್ನು ನೋಡಿದರೂ ಸಹ ಯಾವಾಗ ಮಾಡುತ್ತಾರೆ, ಎಷ್ಟು ಮಾಡುತ್ತಾರೆ. ಎನ್ನತಕ್ಕ ಟೈಮ್ ಬಾಂಡ್ ಸಹಿತ ಇಲ್ಲ. ಪರಿವರ್ತನೆ ಮಾಡುತ್ತೇವೆಂದು ಹೇಳಿದ್ದಾರೆಯೇ ಹೊರತು ಯಾವಾಗ ಮಾಡುತ್ತಾರೆ ಎಷ್ಟು ಮಾಡುತ್ತಾರೆಂದು ಹೇಳಿಲ್ಲ.

ಅದಕ್ಕಾಗಿ ಖಚಿತವಾಗಿ ಈ ಒಂದು ವರ್ಷದಲ್ಲಿ ಎಷ್ಟು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುತ್ತಿದ್ದೀರಿ ಎಂದು ಶ್ರೀಮಾನ್ ಚೌವಾಣ್‌ರವರು ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಕೆಲವು ಕ್ರೈಟೀರಿಯಗಳನ್ನು ಫಿಕ್ಸ್ ಮಾಡಿ ಆ ಕ್ರೈಟೀರಿಯದ ಒಳಕ್ಕೆ ಬರುವ ಎಲ್ಲಾ ತಾಂಡಾಗಳನ್ನು ಮತ್ತು ಹ್ಯಾಮಲೆಟ್‌ಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ. ಮತ್ತು ಇದರ ಬಗ್ಗೆ ಅಬ್ಜೆಕ್ಷನ್ಸ್ ಏನಾದರೂ ಸಹ ಇದ್ದರೆ ಅದನ್ನು ಕಾಲ್‌ಫಾರ್ ಮಾಡಿ, ಡೆಪ್ಯೂಟಿ ಕಮೀಷನರ್‌ರಿಂದ ಮಾಹಿತಿಯನ್ನು ತರಿಸಿಕೊಂಡು ನಾವು ನೋಟಿಫಿಕೇಷನ್ ಇಶ್ಯೂ ಮಾಡುತ್ತೇವೆಂದು ಹೇಳಿದ್ದೇವೆ. ಇನ್ನು 8 ದಿನಗಳೊಳಗೆ ಗುಲ್ಬರ್ಗಾದಿಂದ ವರದಿ ಬರುತ್ತದೆ, ನಾವು ಅದನ್ನು ಮಾಡುತ್ತಿದ್ದೇವೆ. ಅವರು ಇದನ್ನು ಬಹಳ ದಿವಸಗಳಿಂದ ಹೇಳುತ್ತಿದ್ದೇನೆಂದು ಹೇಳಿದರು. ಆದರೆ ನಾವು ಬಂದಮೇಲೆ ಇದಕ್ಕೆ ಹೆಚ್ಚು ಆಸಕ್ತಿ ವಹಿಸಿ ಬಹುಶಃ ಅವರು ಪ್ರಶ್ನೆಯನ್ನು ಕೇಳುವ ಮೊದಲೆ ಈ ಪ್ರಶ್ನೆಯನ್ನು ತೆಗೆದುಕೊಂಡು ಮಾಡುತ್ತಿದ್ದೇವೆ. ಏಕೆಂದರೆ, ಈ ರೆವಿನ್ಯೂ ವಿಲೇಜನ್ನು ಫಿಕ್ಸ್ ಮಾಡಬೇಕಾದರೆ 1500 ಎಕರೆ ಲ್ಯಾಂಡ್ ಬೇಕು. ಮತ್ತು ಯಾವ ಸರ್ವೆ ನಂಬರ್‌ನ್ನು ಅದಕ್ಕೆ ಸೇರಿಸಬೇಕು, ಯಾವ ಸರ್ವೆ ನಂಬರ್ ಸೇರಿಸಿದರೆ ಅದರ ಅಡ್ಜಸೆಂಟ್ ತಾಂಡಾಗಳಿಗೆ ಸರಿಯಾಗುತ್ತದೆ ಇವೆಲ್ಲವನ್ನು ಕೂಡ ಪ್ರತಿಯೊಂದು ತಾಂಡಾಗಳಿಗೂ ಮಾಡುವಾಗ ಸರ್ವೆ ಮಾಡಬೇಕಾಗುತ್ತದೆ. ಸರ್ವೆ ಮಾಡಿದ ಮೇಲೆ ಇಂತಿಂಥ ಸರ್ವೆ ನಂಬರ್‌ಗಳು ಇಂತಿಂಥ ತಾಂಡಾಗಳಿಗೆ ಹೋಗುತ್ತದೆ, ಈ ತಾಂಡಾಗಳನ್ನು ರೆವಿನ್ಯೂ ವಿಲೇಜ್ ಎಂದು ನಾವು ಘೋಷಣೆ ಮಾಡುತ್ತೇವೆಂದು ನೋಟಿಪಿಕೇಷನನ್ನು ಹಾಕಬೇಕಾಗುತ್ತದೆ. ಆಗ ಅದನ್ನು ಮಾಡುತ್ತೇವೆ. ನಾವು ಇದರ ಬಗ್ಗೆ ಎಲ್ಲಾ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಅದರ ಪ್ರಕಾರ ಹಂತ ಹಂತವಾಗಿ ಮಾಡುತ್ತೇವೆ. ಅವರು ಏನೂ ಭಯಪಡಬಾರದು. ಅವರ ಅವಧಿ ಮುಗಿಯುವುದರೊಳಗೆ ಎಲ್ಲವನ್ನು ಸಂಪೂರ್ಣವಾಗಿ ರೆವಿನ್ಯೂ ವಿಲೇಜ್ ಆಗಿ ಡಿಕ್ಲೇರ್ ಮಾಡುತ್ತೇವೆ.

(ಗೊಂದಲ)

ಡಾ. ಹೆಗ್ಗಪ್ಪ ದೇಶಪ್ಪ ಲಮಾಣಿ : ಹೋದ ಸಾರಿಯೂ ಸಹ ಹೀಗೆಯೆ ಹೇಳಿದ್ದೀರಿ, ಈ ಸಾರಿಯೂ ಹಾಗೆಯೆ ಹೇಳುತ್ತಿದ್ದೀರಿ ಅವಧಿ ಮುಗಿದು ಹೋದಮೇಲೆ ಹೇಳುತ್ತೀರಾ?

(ಗೊಂದಲ)

ಅಧ್ಯಕ್ಷರು : ನೀವು 365 ದಿನಗಳ ಕೆಳಗೆಯೇ ಈ ಆಶ್ವಾಸನೆಯನ್ನು ಕೊಟ್ಟಿದ್ದೀರೆಂದು.....

ಡಾ. ಲಮಾಣಿಯವರು ಹೇಳುತ್ತಾರೆ. ನಿಮಗೆ 365 ದಿನಗಳು ಬೇಕಾಗಿತ್ತೆ ಡೆಪ್ಯೂಟಿ ಕಮೀಷನರ್‌ರಿಂದ ರಿಪೋರ್ಟ್‌ನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಫಾಲೋ ಆಪ್ ಆಕ್ಷನ್ ತೆಗೆದುಕೊಳ್ಳತಕ್ಕಂಥದಕ್ಕೆ. ಇಂತಹ ವಿಚಾರದಲ್ಲಿ ಸರ್ಕಾರ ಸ್ವಲ್ಪ ಚುರುಕಾಗಿ ಕಾರ್ಯನಿರ್ವಹಿಸಿದರೆ ಸದನಕ್ಕೆ ಬಹಳ ಸಂತೋಷವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಆಸಕ್ತಿಯನ್ನು ವಹಿಸಿ ಇದನ್ನು ಮಾಡಿದ್ದೇವೆ. ಈ ರೀತಿಯ ತಾಂಡಾಗಳು 1-2 ಇಲ್ಲ, ಸಾವಿರಾರು ಇವೆ ಎಂದು ತಮಗೂ ಗೊತ್ತು. ಪ್ರತಿಯೊಂದು ತಾಂಡಾವನ್ನು ಸರ್ವೆ ಮಾಡಬೇಕಾಗುತ್ತದೆ. ಏಕೆಂದರೆ, ಅಡ್ಜೆಸೆಂಟ್ ಲ್ಯಾಂಡ್ ಎಷ್ಟು ಇದೆ ಅದನ್ನು ನೋಡಬೇಕು ಕೆಲವು ಕಡೆ

ವಯೊಬಲ್ ಇರುವುದಿಲ್ಲ. ಅದಕ್ಕೆ ಒಂದು ಮೀಟಿಂಗ್‌ನ್ನು ಕರೆದು ಪರಿಶೀಲನೆ ಮಾಡಿ ಈ ದು ಸ್ಟೆಪ್‌ನ್ನು ತೆಗೆದುಕೊಂಡಿದ್ದೇವೆ.

MR. SPEAKER : If I have understood the Members correctly.

ಎಲ್ಲವನ್ನು ಒಟ್ಟಾಗಿ ಮಾಡಿ ಎಂದು ಹೇಳುತ್ತಿಲ್ಲ, at least make a beginning ಕೆಲವನ್ನಾದರೂ ಮಾಡಿ, ಇಷ್ಟನ್ನು ಮಾಡಿದ್ದೇವೆ, ಇಷ್ಟು ಉಳಿದಿದೆ, ಅದನ್ನು ರಿಪೋರ್ಟ್ ತರಿಸಿಕೊಂಡು ಮಾಡುತ್ತೇವೆ ಎನ್ನತಕ್ಕದನ್ನು ಹೇಳಬೇಕಲ್ಲವೆ?

(ಗೊಂದಲ)

ಶ್ರೀ ಎಸ್.ಎಂ. ಯಾಹ್ಯಾ : ಲಂಬಾಣಿ ಕ್ರೈಟೀರಿಯಾ ಯಾವುದೆಂದು ರೆವಿನ್ಯೂ ಮಿನಿಸ್ಟರ್ ಹೇಳುತ್ತಿದ್ದಾರೆ. ಈ ಕ್ರೈಟೀರಿಯಾ ನೋಡಿದರೆ ಇನ್ನು ಒಂದೆರಡು ವರ್ಷಗಳಲ್ಲಿ ಆಗುವ ಹಾಗೆ ಕಾಣುತ್ತಿಲ್ಲ. ಅದನ್ನು ರೀಕನ್ಸಿಡರ್ ಮಾಡಿ, ಈ ಕ್ರೈಟೀರಿಯಾವನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಬೇಕಾಗಿದೆ. ಈ ಐದು ಕಂಡೀಷನ್‌ಗಳನ್ನು ನೋಡುವಾಗ ಈ ಐದು ಕಂಡೀಷನ್‌ಗಳ ಪ್ರಕಾರ ಐದು ವರ್ಷಗಳಲ್ಲಿ ಆಗುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ತೋರುತ್ತಿದೆ. ಆದ್ದರಿಂದ ಈ ಕ್ರೈಟೀರಿಯಾವನ್ನು ರಿವೈಸ್ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಒಂದೆರಡು ಕಂಡೀಷನ್ಸ್ ಆಗದೇ ಹೋದರೂ ಕೂಡ ರಿಲ್ಯಾಕ್ಸ್ ಮಾಡಿ ಆ ಸೌಲಭ್ಯಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಗೆ ತಿದ್ದುಪಡಿ

446 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡಜ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಗೆ ಒಳಪಟ್ಟು ಮನೆ ಮಾಲೀಕರಿಗೆ ಹಾಲಿ ಇರುವ ವಿನಾಯ್ತಿಯ ಅವಧಿ?

ಆ) ಹೊಸ ಮನೆಗಳ ಮಾಲೀಕರು, ಕಟ್ಟಡಗಳನ್ನು ಕಟ್ಟುವ ವಸ್ತುಗಳ ಬೆಲೆಗಳು ಅಧಿಕವಾಗಿರುವುದರಿಂದ, ಬಾಡಿಗೆ ನಿಯಂತ್ರಣ ಕಾಯ್ದೆಯ ವಿನಾಯ್ತಿಯನ್ನು 12 ವರ್ಷಕ್ಕೆ ವಿಸ್ತರಿಸಬೇಕೆಂದು ಕೇಳುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಮಸೂದೆ ತರಲು, ಸರ್ಕಾರವು ಸಮಿತಿಯೊಂದನ್ನು ರಚಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಮನೆ ಕಟ್ಟಡ ಪೂರೈಸಿದ ನಂತರ 5 ವರ್ಷಗಳು ವಿನಾಯ್ತಿ ಇರುತ್ತದೆ.

ಆ) ಹೌದು.

ಇ) ಇಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕದಲ್ಲಿ ಒಂದು ಕರ್ನಾಟಕ ರೆಂಟ್ ಕಂಟ್ರೋಲ್ ಆಕ್ಟ್ ಎಂದು ಇದೆ. ಈ ರೆಂಟ್ ಕಂಟ್ರೋಲ್ ಆಕ್ಟ್ ಯಾರ ಉದ್ದೇಶಕ್ಕೆ ಆಗಿದೆಯೋ, ಜನಗಳ ಉದ್ದೇಶಕ್ಕಾಗಿಯೋ, ಇಲ್ಲ ಜನಗಳನ್ನು ಕಾಡಿಸುವುದಕ್ಕೆ ಪೀಡಿಸುವುದಕ್ಕೆ ಆಗಿದೆಯೋ ಗೊತ್ತಿಲ್ಲ. ನಮ್ಮ